# ಕರ್ನಾಟಕ ವಿಧಾನ ಪರಿಷತ್

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 707 (767) |
| ಮಾನ್ಯ ಸದಸ್ಯರ ಹೆಸರು | : | ಶ್ರೀ ಹೆಚ್.ಪಿ.ಸುಧಾಮ್ ದಾಸ್ (ನಾಮನಿರ್ದೇಶನ ಹೊಂದಿದವರು) |
| ಉತ್ತರಿಸುವ ದಿನಾಂಕ | : | 23.07.2024 |
| ಉತ್ತರಿಸುವ ಸಚಿವರು | : | ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ದಿನಾಂಕ:29-10-2022 ರಂದು ನಡೆದ ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿನ ಸಭೆಯಲ್ಲಿನ ನಿರ್ಣಯದಂತೆ ಎಸ್.ಸಿ-ಎಸ್.ಟಿ ಜನಾಂಗದವರಿಗೆ ಮೀಸಲಿಟ್ಟಿರುವ ಕೈಗಾರಿಕಾ ಪ್ರದೇಶಗಳನ್ನು ಪರಿಶಿಷ್ಟರಿಗೆ ಹಂಚಿಕೆ ಮಾಡಿ ಉಂಟಾಗಿರುವ ಕೊರತೆಯನ್ನು (Shortfall) ಅಕ್ಕಪಕ್ಕದ ಕೈಗಾರಿಕಾ ಪ್ರದೇಶಗಳಲ್ಲಿ ಒಂದು ಕಾಲಮಿತಿಯೊಳಗೆ ಸರಿದೂಗಿಸಲು ಆದೇಶಿಸಿದ್ದರೂ ನಿಖರ ಕೊರತೆ KIADB ಮಂಡಳಿಗೆ ಗೊತ್ತಿದ್ದರೂ ವಿವಿಧ ಕಾರಣಗಳಿಂದ KIADB ಮಂಡಳಿ ಮರುಸ್ವಾಧೀನ ಪಡೆಯುವ ಅಥವಾ ಪರಿಶಿಷ್ಟ ಜಾತಿ/ಪಂಗಡದವರಿಗೆ ಹಂಚಿಕೆ ಮಾಡಲು ಸರ್ಕಾರಕ್ಕೆ ತೊಂದರೆ ಇದೆಯೇ; | ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವರ್ಗದ ಉದ್ದಿಮೆದಾರರಿಗೆ ದಿನಾಂಕ:21-03-2009 ರಿಂದ ಅನ್ವಯವಾಗುವಂತೆ ಹೊಸ ಕೈಗಾರಿಕಾ ಪ್ರದೇಶಗಳಲ್ಲಿ ಶೇ.22.65% ರಷ್ಟು ನಿವೇಶನಗಳನ್ನು ಹಂಚಿಕೆ ಮಾಡಲು ಕೊರತೆಯುಂಟಾಗಿರುವ ಪ್ರಮಾಣವನ್ನು ಪರಿಶೀಲಿಸಿ ವಿವರಗಳನ್ನು ಸಲ್ಲಿಸಲು ಮಂಡಳಿಯ ಮುಖ್ಯ ಅಭಿಯಂತರ-1 ರವರ ನೇತೃತ್ವದಲ್ಲಿ ಅಧಿಕಾರಿಗಳ ತಂಡ ರಚಿಸಿ ದಿನಾಂಕ:21-08-2023 ರಂದು ಅಧಿಕೃತ ಜ್ಞಾಪನ ಹೊರಡಿಸಲಾಗಿದೆ. ಈ ತಂಡದಲ್ಲಿ ಕರ್ನಾಟಕ ದಲಿತ ಉದ್ದಿಮೆದಾರರ ಸಂಘ (ರಿ) ರವರ ಸದಸ್ಯರು ಒಳಗೊಂಡಿರುತ್ತಾರೆ.<br><br>ಸದರಿ ಅಧಿಕಾರಿಗಳ ತಂಡವು ಈ ನಿಟ್ಟಿನಲ್ಲಿ ಕೊರತೆ ಉಂಟಾಗಿರುವ ಪ್ರಮಾಣದ ಅಂಕಿ-ಅಂಶಗಳನ್ನು ಅಂತಿಮಗೊಳಿಸುತ್ತಿದ್ದು, ಸದರಿ ವರದಿಯನ್ವಯ ಕೊರತೆ ಉಂಟಾದ ಜಮೀನನ್ನು ಪಕ್ಕದ ಹೊಸ ಕೈಗಾರಿಕಾ ಪ್ರದೇಶಗಳಲ್ಲಿ ಸರಿದೂಗಿಸಲು ಕ್ರಮಜರುಗಿಸಲಾಗುತ್ತದೆ. |

| | | |
|---|---|---|
| ಆ) | ಈ ಜನಾಂಗದವರಿಗೆ ಮೀಸಲಿರುವ ನಿವೇಶನಗಳನ್ನು ಇತರರಿಗೆ ಹಂಚಿಕೆ ಮಾಡಿರುವ ಅಧಿಕಾರಿ/ನೌಕರರನ್ನು ಗುರುತಿಸಿ ಶಿಸ್ತುಕ್ರಮ ಜರುಗಿಸಲು ತೆಗೆದುಕೊಂಡ ಕ್ರಮಗಳಾವುವು? (ವಿವರಗಳನ್ನು ಒದಗಿಸುವುದು). | ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಉದ್ದಿಮೆದಾರರಿಗೆ ಮಂಡಳಿಯಲ್ಲಿ ದಿನಾಂಕ:21-03-2009 ರಿಂದ ಅನ್ವಯವಾಗುವಂತೆ ಅಭಿವೃದ್ಧಿಪಡಿಸುತ್ತಿರುವ ಹೊಸ ಕೈಗಾರಿಕಾ ಪ್ರದೇಶಗಳಲ್ಲಿ ಈವರೆಗೆ ಬಹುತೇಕ ಕೈಗಾರಿಕಾ ಪ್ರದೇಶಗಳಲ್ಲಿ ಶೇ.22.65 ರಷ್ಟು ಹಂಚಿಕೆ ಪ್ರದೇಶದ ಜಮೀನನ್ನು ಕಾಯ್ದಿರಿಸಿ ಹಂಚಿಕೆ ಮಾಡಲಾಗಿದೆ.<br><br>ಕೆಲವು ಕೈಗಾರಿಕಾ ಪ್ರದೇಶಗಳಲ್ಲಿ ಬೃಹತ್ ಬಂಡವಾಳ ಹೂಡುವ ಪ್ರಮುಖ ಯೋಜನೆಗಳಿಗೆ ಜಮೀನು ಹಂಚಿಕೆ ಮಾಡಿದ್ದರಿಂದ, ಮೀಸಲಾತಿಯಲ್ಲಿನ ಶೇಕಡವಾರು ಪ್ರಮಾಣ ಕಡಿಮೆಯಾದ ಕಾರಣ ಅಂತಹ ಪ್ರಕರಣಗಳಲ್ಲಿ, ಅಕ್ಕ-ಪಕ್ಕದ ಹೊಸ ಕೈಗಾರಿಕಾ ಪ್ರದೇಶಗಳಲ್ಲಿ ಶೇಕಡವಾರು ಕೊರತೆಯನ್ನು ಸರಿದೂಗಿಸಲಾಗುತ್ತದೆ.<br><br>ಅಲ್ಲದೇ, ಇನ್ನೂ ಕೆಲವು ಕೈಗಾರಿಕಾ ಪ್ರದೇಶಗಳಲ್ಲಿ ಮೀಸಲಿಟ್ಟ ಜಮೀನಿನಲ್ಲಿ ತಕರಾರು, ಭೂಸ್ವಾಧೀನಕ್ಕೆ ಸಂಬಂಧಿಸಿದಂತೆ ಸಮಸ್ಯೆಗಳು ಇದ್ದ ಕಾರಣದಿಂದ ಶೇಕಡವಾರು ಪ್ರಮಾಣ ಕಡಿಮೆಯಾದ ಕಾರಣ ಹೊಸ ಕೈಗಾರಿಕಾ ಪ್ರದೇಶಗಳಲ್ಲಿ ಶೇಕಡವಾರು ಕೊರತೆಯನ್ನು ಸರಿದೂಗಿಸಲಾಗುತ್ತದೆ.<br><br>ಈ ರೀತಿ ಹಲವು ಕಾರಣಗಳಿಂದ ಕೊರತೆಯುಂಟಾದ ಜಮೀನನ್ನು ಸರಿದೂಗಿಸಲಾಗುತ್ತಿರುವುದರಿಂದ ಮೀಸಲಾತಿ ಕಲ್ಪಿಸುವಲ್ಲಿ ಉಲ್ಲಂಘನೆಯಾಗುತ್ತಿಲ್ಲ. |

ಸಂಖ್ಯೆ: ಸಿಐ 275 ಐಎಪಿ 2024

**(ಎಂ.ಬಿ.ಪಾಟೀಲ)**
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ
ಮೂಲಸೌಲಭ್ಯ ಅಭಿವೃದ್ಧಿ ಸಚಿವರು